ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 884(971)

ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 20.09.2021

ಉತ್ತರಿಸುವವರು : ಮಾನ್ಯ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಒಂದು ವರ್ಷದಲ್ಲಿ (ಜನವರಿ 2020 ರಿಂದ ಇಲ್ಲಿಯವರೆಗೆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ನಾಗರಹೊಳೆ, ಬಿಳಿಗಿರಿ ರಂಗನಬೆಟ್ಟ, ಮಲೈಮಹದೇಶ್ವರ ಬೆಟ್ಟ ಮೊದಲಾದ ಅಭಯಾರಣ್ಯ ಹಾಗೂ ಕಾಡುಗಳಲ್ಲಿ ನಡೆದಿರುವ ಕಳ್ಳಬೇಟೆ ಪ್ರಕರಣಗಳ ಸಂಖ್ಯೆ ಎಷ್ಟು; ಈ ಕಳ್ಳಬೇಟೆ ಪ್ರಕರಣಗಳಲ್ಲಿ ಹತ್ಯೆಯಾದ ಜಾನುವಾರುಗಳ ಸಂಖ್ಯೆ ಎಷ್ಟು; ಸದರಿ ಪ್ರಕರಣಗಳಲ್ಲಿ ಅಪರಾಧಿಗಳನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆಯೇ;</td><td>ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯಲ್ಲಿ ಜನವರಿ 2020 ರಿಂದ ಇಲ್ಲಿಯವರೆಗೆ ಅರಣ್ಯ ಪ್ರದೇಶದಲ್ಲಿ ನಡೆದಿರುವ ಕಳ್ಳಬೇಟೆ ಪ್ರಕರಣ ಹಾಗೂ ವನ್ಯಪ್ರಾಣಿ ಹತ್ಯೆಯಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-

<u>ಚಾಮರಾಜನಗರ</u>
<table>
<tr><th>ಕ್ರ ಸಂ</th><th>ವಿಭಾಗ</th><th>ಕಳ್ಳಬೇಟೆ ಪ್ರಕರಣ ಗಳು</th><th>ವನ್ಯಪ್ರಾಣಿ ಹತ್ಯೆ</th><th>ಬಂಧಿಸಲಾಗಿರುವ ಅಪರಾಧಿಗಳ ಸಂಖ್ಯೆ</th></tr>
<tr><td>1</td><td>ಬಿ.ಆರ್.ಟಿ</td><td>26</td><td>15</td><td>16</td></tr>
<tr><td>2</td><td>ಎಂ.ಎಂ.ಹಿಲ್ಸ್</td><td>20</td><td>16</td><td>35</td></tr>
<tr><td>3</td><td>ಕಾವೇರಿ ವ.ಜೀ.</td><td>13</td><td>12</td><td>24</td></tr>
<tr><td></td><td>ಒಟ್ಟು</td><td>59</td><td>43</td><td>75</td></tr>
</table>

<u>ಮೈಸೂರು</u>
<table>
<tr><th>ಕ್ರ. ಸಂ</th><th>ವಿಭಾಗ</th><th>ಕಳ್ಳಬೇಟೆ ಪ್ರಕರಣಗಳು</th><th>ವನ್ಯ ಪ್ರಾಣಿ ಹತ್ಯೆ</th><th>ಬಂಧಿಸಲಾಗಿರುವ ಅಪರಾಧಿಗಳ ಸಂಖ್ಯೆ</th></tr>
<tr><td>1</td><td>ಮೈಸೂರು</td><td>9</td><td>8</td><td>12</td></tr>
<tr><td>2</td><td>ಹುಣಸೂರು</td><td>6</td><td>3</td><td>12</td></tr>
<tr><td>4</td><td>ನಾಗರಹೊಳೆ</td><td>22</td><td>23</td><td>23</td></tr>
<tr><td></td><td>ಒಟ್ಟು</td><td>37</td><td>34</td><td>47</td></tr>
</table>
</td></tr>
<tr><td>ಆ)</td><td>ಕಳೆದ ಒಂದು ವರ್ಷದಲ್ಲಿ (ಜನವರಿ 2020 ರಿಂದ ಇಲ್ಲಿಯವರೆಗೆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಅರಣ್ಯಗಳಲ್ಲಿ ಮೃತ ಪಟ್ಟಿರುವ ಆನೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಸಹಜವಾಗಿ ಮೃತಪಟ್ಟಿವೆ; ಎಷ್ಟು ವಿದ್ಯುತ್ ಸಂಪರ್ಕ ಕಲ್ಪಿಸಿದ ತಂತಿಬೇಲಿ ಗಳಿಂದ ಮೃತಪಟ್ಟಿವೆ; ಎಷ್ಟು ಕಳ್ಳಬೇಟೆಯಿಂದ ಮೃತಪಟ್ಟಿವೆ;</td><td>ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಕಾಡಾನೆಗಳು ಮೃತಪಟ್ಟಿರುವ ಪ್ರಕರಣಗಳು ಇರುವುದಿಲ್ಲ.

ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಕಾಡಾನೆಗಳು ಮೃತಪಟ್ಟಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ವಿಭಾಗ</th><th>ಸಹಜವಾಗಿ</th><th>ವಿದ್ಯುತ್ಸ್ಪರ್ಶ</th><th>ಕಳ್ಳಬೇಟೆ</th></tr>
<tr><td>1</td><td>ಬಿ.ಆರ್.ಟಿ</td><td>01</td><td>-</td><td>-</td></tr>
<tr><td>2</td><td>ಎಂ.ಎಂ.ಹಿಲ್ಸ್</td><td>20</td><td>2</td><td>-</td></tr>
<tr><td>3</td><td>ಕಾವೇರಿ ವ.ಜೀ.</td><td>15</td><td>1</td><td>-</td></tr>
<tr><td></td><td>ಒಟ್ಟು</td><td>36</td><td>3</td><td>-</td></tr>
</table>
</td></tr>
</table>

---2

ಕ್ರ. ಸಂ.	ಪ್ರಶ್ನೆ	ಉತ್ತರ
ಇ)	ಆನೆಗಳು ರೈತಾಪಿ ಜನರ ಜಮೀನುಗಳ ಮೇಲೆ ದಾಳಿ ಮಾಡಿ ಬೆಳೆ ನಾಶ ಮಾಡದಂತೆ ಕೈಗೊಂಡಿರುವ ಕ್ರಮಗಳೇನು; ಕಳೆದ ಮೂರು ವರ್ಷದಿಂದ ಈಚೆಗೆ ಈ ಕಾಡಿನ ಆನೆಗಳ ಮೇವಿಗೋಸ್ಕರ ಕಾಡಿನಲ್ಲಿ ಗೂನ ಬಿಡದ ಬಾಳೆಗಿಡ, ಬಿದಿರು, ಜೊಂಡು, ಸೊಪ್ಪು ನೀಡುವ ಮರಗಿಡಗಳನ್ನು ನೆಟ್ಟು ಬೆಳೆಸಲಾಗುತ್ತಿದೆಯೇ; ಯಾವ ಪ್ರಮಾಣದಲ್ಲಿ ನೆಟ್ಟು ಬೆಳಸಲಾಗುತ್ತಿದೆ? (ವಿವರ ಒದಗಿಸುವುದು)	ಆನೆಗಳು ರೈತಾಪಿ ಜನರ ಜಮೀನುಗಳ ಮೇಲೆ ದಾಳಿ ಮಾಡಿ ಬೆಳೆನಾಶ ಮಾಡದಂತೆ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ. 1. ಕಾಡಾನೆಗಳನ್ನು ನಿಯಂತ್ರಿಸಲು ತಲಾ 4 ಜನರ ತಂಡದಂತೆ ಕಾಡಾನೆಗಳನ್ನು ಹಿಮ್ಮೆಟ್ಟಿಸುವ ತಂಡಗಳು, ಕ್ಷಿಪ್ರಕಾರ್ಯಪಡೆ ತಂಡಗಳನ್ನು ರಚಿಸಿ, ಕಾಡಾನೆಗಳು ನಾಡಿಗೆ ಬಾರದಂತೆ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಕೈಗೊಳ್ಳಲಾಗುತ್ತಿದೆ. 2. ಆನೆ ನಿರೋಧಕ ಕಂದಕ ನಿರ್ಮಾಣ. 3. 50% ಸಹಾಯಧನ (ಸಬ್ಸಿಡರಿ) ಆಧಾರಿತ ಸೋಲಾರ್ ತಂತಿ ಬೇಲಿ ನಿರ್ಮಾಣ. 4. ಉಪಯೋಗಿತ ರೈಲ್ವೆ ಹಳಿಗಳನ್ನುಉಪಯೋಗಿಸಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ. 5. ಉಪದ್ರುವಕಾರಿ ಪುಂಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸುವ ಕಾರ್ಯ. 6. ಪಟಾಕಿ ಖರೀದಿಸಿ ರೈತರಿಗೆ ಹಂಚಿಕೆ ಮಾಡಿರುವುದು. 7. ಅರಣ್ಯದೊಳಗೆ ಅಟ್ಟಣಿಗೆಗಳ ನಿರ್ಮಾಣ. 8. ವೀಕ್ಷಣಾ ಗೋಪುರಗಳ ನಿರ್ಮಾಣ. 9. ವೀಕ್ಷಣಾ ರೇಖೆಗಳ ನಿರ್ವಹಣೆ 10. ಮಾನವ-ವನ್ಯಪ್ರಾಣಿಗಳ ಸಂಘರ್ಷ ನಿಯಂತ್ರಣದ ಬಗ್ಗೆ ರೈತರಿಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಮುಂದುವರೆದು, ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹಾಗೂ ವನ್ಯಪ್ರಾಣಿಗಳಿಗೆ ಅರಣ್ಯದಲ್ಲಿ ಮೇವಿನ ಕೊರತೆ ನೀಗಿಸಲು ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ.

ಸಂಖ್ಯೆ: ಅಪಜೀ 186 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು